ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೇ, ತಮ್ಮಲ್ಲಿ ನಾನು ಕ್ಷಮೆ ಕೇಳುತ್ತಿದ್ದೇನೆ. ಕನ್ನಡಕ್ಕೆ ಆಲ್ಲಿ ಅನ್ಯಾಯವಾಗಿದೆ, ಅದನ್ನು ಸರಿಪಡಿಸಿ ಎಂದು ನಾವು ಕೇಳುತ್ತಿರುವುದು.

ಅಧ್ಯಕ್ಷರು.—ಇಲ್ಲಿಗೆ ಇದನ್ನು ಸಾಕು ಮಾಡೋಣ. ಮುಂದಿನ ಗವಂನ ಸೆಳೆಯುವ ಸೂಚನೆಯಂನ್ನು ಶ್ರೀ ಶ್ರೀನಿವಾಸ್ ಅವರು ಕೇಳುತ್ತಾರೆ. ಶ್ರೀನಿವಾಸ್‌ರವರೇ ನಿಲವು ಮಾತನಾಡಿ.

ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ,.....

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸರಿಯಾದ ಉತ್ತರ ಕೊಟ್ಟಿಲ್ಲ. ಕಳೆದ ವರ್ಷ ಜನವರಿ ೨೧ನೇ ತಾರೀಖು ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಬಂಗಾರಪ್ಪನವರು ಇದರ ಬಗ್ಗೆ ಒಂದು ನಿಲುವಳಿ ಸೂಚನೆಯನ್ನು ತಂದಿದ್ದರು. ಆಗ ಪಕ್ಷ ಭೇದವಿಲ್ಲದೆ ನಾವೆಲ್ಲರೂ ಬೆಂಬಲವನ್ನು ಕೊಟ್ಟಿದ್ದೆವು. ಆದರೆ ಮಾರನೇ ದಿವಸವೇ ಬೆಳಗಾವಿಯಲ್ಲಿ.....

ಅಧ್ಯಕ್ಷರು.—ತುಂಗಳರವರೇ, ಸಾಕುಮಾಡಿ. ನೀವು ಸಾಕಷ್ಟು ಹೇಳಿದ್ದೀರಿ.

ಶ್ರೀ ಜಿ. ನಾರಾಯಣಕುಮಾರ್.—ವಿಷಯ ಪ್ರಸ್ತಾಪ ಮಾಡಿದಂಥ ಮಾನ್ಯ ಸದಸ್ಯರು ಇನ್ನೂ ಎದ್ದು ನಿಂತಿದ್ದಾರೆ. ಮಾನ್ಯ ಮಂತ್ರಿಗಳು ಅದಕ್ಕೆ ಉತ್ತರವನ್ನೇ ಕೊಟ್ಟಿಲ್ಲ. ಅವರು ಉತ್ತರ ಕೊಡಲಿ.

(ಗೊಂದಲ)

ಶ್ರೀ ಜಿ ನಾರಾಯಣಕುಮಾರ್.—ಶ್ರೀ ತುಂಗಳ್ ಅವರು ನಿಂತೇ ಇರುವಾಗ ನೀವು ಬೇರೆಯವರನ್ನು ಕರೆದಿದ್ದೀರಿ.

ಅಧ್ಯಕ್ಷರು.— ನೀವು ಕೂತ್ಕೊಳ್ಳಿ.

ಶ್ರೀ ಜಿ. ನಾರಾಯಣಕುಮಾರ್.—ನೀವು ಹೀಗೆ ಕೂತ್ಕೊಳ್ಳಿ ಎಂದು ಹೇಳುವುದಾದರೆ ನಾವೇನು ಸ್ಕೂಲ್ ಹುಡುಗರೇ ?

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ನಾನು ಎರಡು ಮಾತನ್ನು ಹೇಳಬೇಕಾಗಿದೆ ಅಧ್ಯಕ್ಷರೇ...

ಅಧ್ಯಕ್ಷರು.—ನೀವು ಕೂತ್ಕೊಳ್ಳಿ.—ನಾನು ಈಗ ಶ್ರೀ ಶ್ರೀನಿವಾಸ್ ಅವರನ್ನು ಕರೆದಿದ್ದೇವೆ.

(೯) ಶಿವಮೊಗ್ಗ ತಾಲ್ಲೂಕು, ಚಿಕ್ಕಮರಡಿ ಗ್ರಾಮದ ಇಬ್ಬರು ಕೂಲಿಯಾಳುಗಳು ನಾಪತ್ತೆಯಾಗಿರುವ ಬಗ್ಗೆ.

ಶ್ರೀ ಕೆ. ಹೆಚ್. ಶ್ರೀನಿವಾಸ್(ಶಿವಮೊಗ್ಗ).—ಮಾನ್ಯ ಅಧ್ಯಕ್ಷರೇ, ನಾನು ಶಿವಮೊಗ್ಗ ತಾಲ್ಲೂಕು ಚಿಕ್ಕಮರಡಿ ಗ್ರಾಮದ ಹರಿಜನ ಗಿರಿಜನ ಕೋಮಿಗೆ ಸೇರಿದ ಇಬ್ಬರು ಕೂಲಿಯಾಳುಗಳು ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನ ಪೋಲೀಸರ ವಶದಿಂದ ನಾಪತ್ತೆಯಾಗಿರುವ ವಿಚಾರದ ಬಗ್ಗೆ ಮಾನ್ಯ ಗೃಹ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ. ಶಿವಮೊಗ್ಗ ತಾಲ್ಲೂಕಿನ ಚಿಕ್ಕಮಾರಡಿ ಗ್ರಾಮದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದ ಇಬ್ಬರು ಕೂಲಿಯವರು ಧಾರವಾಡ ಜಿಲ್ಲಾ ರೋಣ ತಾಲ್ಲೂಕಿನ ಪೋಲೀಸರ ಅಭಿರಕ್ಷೆಯಿಂದ ನಾಪತ್ತೆಯಾಗಿದ್ದಾರೆ ಎಂಬುದರ ಬಗ್ಗೆ ಗದಗ್ ವಿಭಾಗದ ಆರಕ್ಷಕ ಉಪ ಅಧೀಕ್ಷಕರವರ ವಾಲಿಕ ತನಿಖೆ ಮಾಡಿಸಲಾಯಿತು. ತನಿಖೆಯ ಪ್ರಕಾರ ಚಿಕ್ಕಮಾರಡಿ ಗ್ರಾಮದ ಯಾರನ್ನೂ ಕೂಡ ರೋಣ ಪೋಲೀಸ್ ಠಾಣೆಗೆ ತಂದಿಲ್ಲವೆಂದು ಮತ್ತು ಕೂಡಿ ಹಾಕಿಲ್ಲವೆಂದು ಕಂಡು ಬಂದಿದೆ. ಇತರ ಪೋಲೀಸ್ ಠಾಣೆಗಳಲ್ಲಿ ಈ ಬಗ್ಗೆ ವಿಚಾರಿಸಲಾಗಿ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ನೆಲ್ಲೂರಿನ ದನಚಿನ ಮಂಗ ಮಂಜುನಾಥ ಮತ್ತು ಗೋಪನಾಲ್ ಗ್ರಾಮದ ಚಮಲ್ಲನ ಮಂಗ ಬೋರ್ಲಿ ಎಂಬುವರು ಮುಳಗುಂದ್‌ನಲ್ಲಿ ದಿನಾಂಕ ೬-೨-೮೬ರಂದು ರಾತ್ರಿ ಸುಮಾರು ೩-೩೧ ಗಂಟೆ ಸಮಯದಲ್ಲಿ ಸಂಶಯಾಸ್ಪದ ರೀತಿಯಲ್ಲಿ ಓಡಾಡುವುದನ್ನು ಕಂಡು ಅವರನ್ನು ಮುಳಗುಂದ್ ಪೋಲೀಸರು ದಸ್ತಗಿರಿ ಮಾಡಿ ಗದಗ್ ತಾಲ್ಲೂಕಿನ ದಂಡಾಧಿಕಾರಿಯವರ ಮುಂದೆ ಹಾಜರ್‌ಪಡಿಸಿದರು. ತಾಲ್ಲೂಕಿನ ದಂಡಾಧಿಕಾರಿಯವರು ಆರೋಪಿಗಳನ್ನು ದಿನಾಂಕ ೧೭-೨-೮೬ರವರೆಗೆ ನ್ಯಾಯಾಂಗ ಅಭಿರಕ್ಷೆಗೆ ಒಳಪಡಿಸಿದರು ಆವರಿಗೆ ಯಾರೂ ಜಾಮೀನು ಕೊಡಲು ಬರದೆ

ಇದ್ದ ಕಾರಣ ನ್ಯಾಯಾಂಗ ಅಭಿರಕ್ಷೆಯನ್ನು ದಿನಾಂಕ ೨೪-೨-೮೬ರವರೆಗೆ ವಿಸ್ತರಿಸಲಾಯಿತು. ದಿನಾಂಕ ೨೪-೨-೮೬ರಂದು ಗದಗ್ ವಕೀಲರಾದ ಶ್ರೀ ಹೊಸಮನಿಯವರು ಕೊಟ್ಟ ಜಾಮೀನಿನ ಮೇಲೆ ಇವರಿಬ್ಬರನ್ನು ತಾಲ್ಲೂಕಿನ ದಂಡಾಧಿಕಾರಿಯವರು ಬಿಡುಗಡೆ ಮಾಡಿ ಪೊಕದ್ದಮೆಯನ್ನು ದಿನಾಂಕ ೨೮-೨-೮೬ಕ್ಕೆ ವಿಚಾರಣೆಗಾಗಿ ಮುಂದೂಡಿದರು. ಮೃತ್ಯುಂಡವರನ್ನು ಬಿಟ್ಟರೆ ಬೇರೆ ಯಾರನ್ನೂ ಧಾರವಾಡ ಜಿಲ್ಲೆಯಂ ರೋಣ ಪೋಲೀಸರಾಗಲಿ, ಅಥವಾ ಇತರೆ ಪೋಲೀಸರಾಗಲಿ ದಸ್ತಗಿರಿ ಮಾಡಿಲ್ಲ ವೆಂದು ವರದಿಯಾಗಿದೆ

ಶ್ರೀ ಕೆ. ಹೆಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ನಾನು ಕೇಳಿರುವ ವಿಷಯವೇ ಬೇರೆ, ಮಾನ್ಯ ಮಂತ್ರಿಗಳು ಕೊಟ್ಟಿರುವ ಹೇಳಿಕೆಯೇ ಬೇರೆಯಾಗಿದೆ. ನಾನು ಹೇಳುತ್ತಿರತಕ್ಕಂಥಾದ್ದು ಶಿವಮೊಗ್ಗ ತಾಲ್ಲೂಕಿನ ಚಿಕ್ಕಮಾರಡಿ ಗ್ರಾಮದಲ್ಲಿ ಲಂಬಾಣಿ ಜನಾಂಗಕ್ಕೆ ಸೇರಿದ ಇಬ್ಬರು ಮುಂದಾಳು ಗಳ ಬಗ್ಗೆ. ಒಂದು ಪೋಲೀಸ್ ಜೀಪ್ ಬಂದು ಅವರನ್ನು ಯಾವುದೋ ಒಂದು ಮನೆ ತೋರಿಸಿ, ಊರು ತೋರಿಸಿ ಎಂದು ಕರೆದಿದ್ದಾರೆ. "ಇವರನ್ನು ಸ್ವಲ್ಪ ಕರೆದುಕೊಂಡು ಹೋಗುತ್ತೇವೆ" ಎಂದು ಹೇಳಿದ್ದಾರೆ, ಆಮೇಲೆ ಇವರು ಜನವರಿ ೧೭ನೇ ತಾರೀಕಿಗೆ ಕರೆದುಕೊಂಡು ಹೋದಮೇಲೆ ಇವತ್ತಿನ ವರೆಗೂ ಆ ಇಬ್ಬರು ವ್ಯಕ್ತಿಗಳು ಪತ್ತೆಯಾಗಿಲ್ಲ. ಅವರ ಹೆಂಡತಿಯವರಂ ದೂರು ಕೊಟ್ಟು ಹೈಕೋರ್ಟಿಗೆ ಒಂದು ಅರ್ಜಿ ಕಳಿಸಿದ್ದಾರೆ. ಲೋಕಲ್ ಪೋಲೀಸರಿಗೂ ದೂರನ್ನು ಕೊಟ್ಟಿದ್ದಾರೆ. ಇದೆಲ್ಲಾ ವಿವರಗಳನ್ನೂ ನಾನು ತಮಗೆ ಕೊಟ್ಟಿದ್ದೇನೆ. ಮಾನ್ಯ ಗೃಹಸಚಿವರು ಶಿವಮೊಗ್ಗ ಜಿಲ್ಲೆಗೆ ಬಂದಿದ್ದಾಗ, ಜಿಲ್ಲಾ ರಕ್ಷಣಾಧಿಕಾರಿಗಳ ಜೊತೆಯಲ್ಲಿ ಇದನ್ನು ಪ್ರಸ್ತಾಪ ಮಾಡಿದ್ದೇನೆ. ನನಗೆ ಬೇಕಾಗಿರತಕ್ಕಂಥಾದ್ದು ಏನೆಂದರೆ, ಈ ಗ್ರಾಮದಲ್ಲಿ ಇಬ್ಬರು ಏನು ನಾಪತ್ತೆಯಾಗಿದ್ದಾರೆ, ಇದರ ಬಗ್ಗೆ ವಿವರ ಬೇಕು. ಅವರ ಹೆಂಡಂದಿರು ಕೊಟ್ಟಿರುವ ದೂರಿನ ಪ್ರಕಾರ ರೋಣ ಪೋಲೀಸ್ ಠಾಣೆಯ ಪೋಲೀಸರು ಅವರನ್ನು ಕರೆದುಕೊಂಡು ಹೋಗಿದ್ದಾರೆ. ಇದು ಏನಾಗಿದೆ ಎಂದರೆ, ರೋಣದಲ್ಲಿ ಸಬ್ ಇನ್‌ಸ್ಪೆಕ್ಟರ್ ಅವರು ಏನು ಇವರನ್ನು ಕರೆದುಕೊಂಡು ಹೋದರು, ಅವರು ಪೋಪ್‌ರವರು ಭಾರತಕ್ಕೆ ಭೇಟಿಕೊಟ್ಟ ಕಾಲದಲ್ಲಿ ಇವರನ್ನು ಸ್ಪೆಷಲ್ ಡ್ಯೂಟಿಗೆ ಹಾಕಿದ್ದರು. ಅಲ್ಲಿ ಅವರು ಹೃದಯಾಘಾತದಿಂದ ನಿಧನ ಹೊಂದಿದ್ದಾರೆ. ಯಾರು ಇಬ್ಬರನ್ನು ಕರೆದುಕೊಂಡು ಹೋಗಿದ್ದರೋ, ಅವರು ಈ ಸ್ಪೆಷಲ್ ಡ್ಯೂಟಿ ಮಾಡುತ್ತಿದ್ದಾಗ ಹೃದಯಾಘಾತದಿಂದ ಮೃತರಾಗಿದ್ದಾರೆ.

೩-೦೦ ಪಿ. ಎಂ.

ಇದುವರೆಗೂ ಅವರಿಬ್ಬರೂ ಪತ್ತೆಯಾಗಿಲ್ಲ. ಅವರಿಬ್ಬರೂ ಸಂಶಯಾಸ್ಪದ ರೀತಿಯಲ್ಲಿ ಓಡಾಡುತ್ತಿದ್ದರೆಂಬ ಕಾರಣದಿಂದ ಪೋಲೀಸರು ಕರೆದುಕೊಂಡು ಹೋಗಲಿಲ್ಲ, ಯಾವುದೋ ಊರು ಇಲ್ಲವೇ ಯಾವುದೋ ಮನೆ ತೋರಿಸಬೇಕೆಂದು ಹೇಳಿ ಕರೆದುಕೊಂಡು ಹೋಗಿದ್ದಾರೆ. ಆದರೆ ಈಗ ಮಾನ್ಯ ಮಂತ್ರಿಗಳು ಇದಕ್ಕೆ ಸಂಬಂಧಪಡದ ಹೇಳಿಕೆಯನ್ನು ಕೊಟ್ಟಿದ್ದಾರೆ. ಇವರಿಬ್ಬರ ಬಗ್ಗೆ ಪೂರ್ಣ ವಿವರ ಗಳನ್ನು ನಾನು ಈಗಾಗಲೇ ಮಾನ್ಯ ಮಂತ್ರಿಗಳಿಗೆ ಮತ್ತು ಜಿಲ್ಲಾ ರಕ್ಷಣಾಧಿಕಾರಿ ಅವರಿಗೆ ಕೊಟ್ಟಿದ್ದೇನೆ. ಆದರ ಒಂದು ಆಧಾರದ ಮೇಲೆ ಈ ಇಬ್ಬರನ್ನು ಪತ್ತೆ ಮಾಡಿಸಬೇಕು ಪೋಲೀಸರಂ ಇವರಿಬ್ಬರನ್ನು ಕರೆದುಕೊಂಡು ಹೋಗಿಲ್ಲ ಎಂದರೆ, ಅವರೇನಾದರೂ ಸತ್ತು ಹೋಗಿದ್ದಾರೆಯೇ ಎಂಬುದಾದರೂ ನಮಗೆ ತಿಳಿಯಬೇಕಾಗಿದೆ. ರೋಣ ಪೋಲೀಸ್ ಠಾಣೆಗೆ ಟೆಲಿಫೋನ್ ಮಾಡಿ ಕೇಳಿದರೆ, ಅವರು ಈ ಇಬ್ಬರು ಕೂಲಿಯವರನ್ನು ದಸ್ತಗಿರಿ ಮಾಡಿಲ್ಲ ಎಂದು ಹೇಳುತ್ತಾರೆ. ಆದರೆ ಪೋಲೀಸರು ಕರೆದು ಕೊಂಡು ಹೋದಮೇಲೆ ಅವರು ವಾಪಸ್ ಊರಿಗೆ ಬಂದಿಲ್ಲ. ಎಷ್ಟು ಪ್ರಯತ್ನ ಮಾಡಿದರೂ ಅವರ ಪತ್ತೆಯಾಗಿಲ್ಲ. ತಾವು ಶಿವಮೊಗ್ಗಕ್ಕೆ ಬಂದಿದ್ದಾಗ ಸಹ ಈ ಬಗ್ಗೆ ನಾನು ಎಲ್ಲ ವಿವರಗಳನ್ನು ಕೊಟ್ಟಿದ್ದೇನೆ. ಆದ್ದರಿಂದ ಅವರನ್ನು ಪತ್ತೆ ಮಾಡಿಸಲು ತಾವು ವ್ಯವಸ್ಥೆ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಹೇಳಿದ ಎಲ್ಲ ವಿಷಯಗಳನ್ನು ನಾನು ಗಮನದಲ್ಲಿಟ್ಟು ಕೊಂಡಿದ್ದೇನೆ. ಆದರೆ ಈ ಬಗ್ಗೆ ನಮ್ಮ ಅಧಿಕಾರಿಗಳನ್ನು ವಿಚಾರಿಸಲಾಗಿ, ಅವರು ಯಾರನ್ನೂ ಕರೆದುಕೊಂಡು ಹೋಗಿಲ್ಲ ಎಂದು ಹೇಳಿದ್ದಾರೆ. ಈ ಕಾರಣದಿಂದ ಮಾನ್ಯ ಸದಸ್ಯರು ಈ ಇಬ್ಬರು ಕೂಲಿಯವರ ಫೋಟೋಗಳನ್ನು ಕೊಟ್ಟರೆ, ಅದನ್ನು ಪ್ರಕಟಣೆ ಮಾಡಿಸಿ, ಅವರು ಎಲ್ಲಿದ್ದಾರೆಂಬುದನ್ನು ಪತ್ತೆ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಈ ಇಬ್ಬರು ಕೂಲಿಯವರನ್ನು ಕರೆದುಕೊಂಡು ಹೋದ ಪೋಲೀಸ್ ಅಧಿಕಾರಿ ಹೃದಯಾಘಾತದಿಂದ ಸತ್ತಿದ್ದು ಪತ್ರಿಕೆಗಳಲ್ಲಿ ವರದಿಯಾಗಿದೆ. ಈ ಇಬ್ಬರು ಕೂಲಿಯವರು ನಾಪತ್ತೆಯಾದಮೇಲೆ ಅವರ ಹೆಂಗಸರು ರಾಜ್ಯದ ಉಚ್ಚನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದ ನಂತರವೇ ಈ ಪೋಲೀಸ್ ಅಧಿಕಾರಿ ಹೃದಯಾಘಾತದಿಂದ ಸತ್ತಿದ್ದಾರೆ. ಆದ್ದರಿಂದ ಇದು ಒಂದಕ್ಕೊಂದಕ್ಕೆ ಸಂಬಂಧವಿರಬಹುದು ಅಥವಾ ಇಲ್ಲದಿರಬಹುದು. ಇವರಿಬ್ಬರನ್ನು ರೋಣ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗದಿದ್ದರೆ, ಇವರು ಎಲ್ಲಿದ್ದಾರೆಂಬುದನ್ನು ಪತ್ತೆ ಮಾಡುವಂತೆ ತಾವು ಆಜ್ಞೆ ಮಾಡಬೇಕು.

ಶ್ರೀ ಬಿ. ರಾಚಯ್ಯ.—ಅವರ ಫೋಟೋಗಳನ್ನು ಕೊಟ್ಟರೆ ಅವರನ್ನು ಪತ್ತೆ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ಬಗ್ಗೆ ನಾನು ಶಿವಮೊಗ್ಗ ಜಿಲ್ಲಾಧಿಕಾರಿಗಳಿಗೂ ತಿಳಿಸಿದ್ದೇನೆ ಮತ್ತು ಸಿ.ಐ.ಡಿ. ಅವರಿಗೂ ತಿಳಿಸಿದ್ದೇನೆ. ಇಲ್ಲಿ ಕೊಟ್ಟರೂವ ಹೇಳಿಕೆ ಸರಿಯಲ್ಲವೆಂದು ಮಾನ್ಯ ಸದಸ್ಯರು ಹೇಳಿದ್ದಾರೆ. ಆದ್ದರಿಂದ ಈ ಬಗ್ಗೆ ಮತ್ತೆ ತನಿಖೆ ಮಾಡಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ.

(೧) ಪ್ರಾಥಮಿಕ ಶಾಲಾ ಉಪಾಧ್ಯಾಯರುಗಳಿಗೆ ಹೈದರಾಬಾದ್ ವೇತನ ಶ್ರೇಣಿ ಕೊಡುವ ಬಗ್ಗೆ.

ಶ್ರೀ ಬಿ. ರಾಜೂಗೌಡ (ಹನೂರು).—ಮಾನ್ಯ ಅಧ್ಯಕ್ಷರೇ, ೧-೧೧-೧೯೫೬ರಲ್ಲಿ ಕರ್ನಾಟಕಕ್ಕೆ ವಿಲೀನಗೊಂಡು ಹಿಂದೆ ಮದ್ರಾಸ್ ಪ್ರಾಂತ್ಯಕ್ಕೆ ಸೇರಿದ್ದ ಮಂಗಳೂರು, ಕೊಡಗಿಂ ಮತ್ತು ಅದರಲ್ಲೂ ಕೊಳ್ಳೇಗಾಲ ತಾಲ್ಲೂಕಿದ ಎಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಹೈದರಾಬಾದ್ ವೇತನ ಶ್ರೇಣಿಯನ್ನು ಕೊಟ್ಟು ಕೊಳ್ಳೇಗಾಲ ತಾಲ್ಲೂಕಿನ ಕೆಲವರನ್ನು ಈ ಸೌಲಭ್ಯದಿಂದ ಕೈಬಿಟ್ಟಿರುವುದು ವಿಷಾದನೀಯ ವಾಗಿದೆ. ಉದಾಹರಣೆಗೆ ಕೊಳ್ಳೇಗಾಲ ತಾಲ್ಲೂಕಿನ ತಾಳಬೆಟ್ಟದ ಆಶ್ರಯ ಶಾಲೆಯಲ್ಲಿ (ಪ್ರಾಥಮಿಕ ಶಾಲೆ) ಮುಖ್ಯ ಉಪಾಧ್ಯಾಯರಾಗಿ ೧-೨-೧೯೫೬ ರಿಂದಲೂ ಸೇವೆ ಸಲ್ಲಿಸುತ್ತಾ ಬಂದಿರುವ ಶ್ರೀ ಮಾಧುರವರಿಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿಯಲ್ಲಿ ೩೦-೧-೧೯೬೬ರಲ್ಲಿ ಶ್ರೀಯುತರು ಹೈದರಾಬಾದು ವೇತನ ಶ್ರೇಣಿ ಸೌಲಭ್ಯಕ್ಕೆ ಅರ್ಹರಲ್ಲವೆಂದು ವಿಪರ್ಯಾಸದ ಲಿಖಿತ ಉತ್ತರವನ್ನು ಕೊಟ್ಟಿದ್ದಾರೆ. ಇದು ಮಲತಾಯಿಯ ಧೋರಣೆಯಲ್ಲದೆ ಮತ್ತೇನು ? ಸಂಬಂಧಪಟ್ಟ ಅಧಿಕಾರಿಗಳು ಆದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ಶ್ರೀ ಸಿ. ಮಾಧು ಅವರಿಗೆ ಹೈದರಾಬಾದು ವೇತನ ಶ್ರೇಣಿಯನ್ನು ಕೊಡಬಹುದೆಂದು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖಾ ನಿರ್ದೇತಕರಿಗೆ ಶಿಫಾರಸು ಮಾಡಬೇಕೆಂದು ಆದೇಶ ಕಳುಹಿಸಿ ಶ್ರೀಯುತರಿಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಜಿ. ಗೋವಿಂದೇಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಕೇವಲ ಒಬ್ಬರ ಬಗ್ಗೆ ಹೇಳುತ್ತಿದ್ದಾರೆ; ಆದರೆ ಕರ್ನಾಟಕ ರಾಜ್ಯದ ಎಲ್ಲಾ ಶಿಕ್ಷಕರ ಪರವಾಗಿ ಶಿಕ್ಷಕರ ಸಂಘದವರು ಹಲವಾರು ಸಲ ನಮ್ಮನ್ನು ಭೇಟಿ ಮಾಡಿ ಹೈದರಾಬಾದ್ ವೇತನ ಶ್ರೇಣಿ ಎಲ್ಲರಿಗೂ ಅನ್ವಯವಾಗ ಬೇಕೆಂದು ಕೇಳಿದ್ದಾರೆ. ಇಂತಹ ಹಲವಾರು ಸಮಸ್ಯೆಗಳು ಇವೆ. ಸರ್ಕಾರ ಇದರ ಬಗ್ಗೆ ಅದಷ್ಟೂ ಜಾಗ್ರತೆಯಾಗಿ ಒಂದು ತೀರ್ಮಾನ ಕೈಕೊಳ್ಳಬೇಕೆಂದು ಯೋಚನೆ ಮಾಡುತ್ತಿದೆ. ಸಾಧ್ಯವಾದಮಟ್ಟಿಗೂ ಇದನ್ನು ಪರಿಶೀಲನೆ ಮಾಡಿ ಸೂಕ್ತ ಕ್ರಮ ಕೈಕೊಳ್ಳುತ್ತೇವೆ.

(೨) ಹುಕ್ಕೇರಿ ತಾಲ್ಲೂಕಿನಲ್ಲಿ ಹಸಿರು ಮಂತ್ತು ಕೆಂಪು ಕಾರ್ಡ್‌ಗಳ ಧಾನ್ಯ ವಿತರಣೆಯಲ್ಲಿ ನಡೆದ ಅವ್ಯವಹಾರ

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).— ಮಾನ್ಯ ಅಧ್ಯಕ್ಷರೇ, ಹುಕ್ಕೇರಿ ತಾಲ್ಲೂಕಿನ ಬೋರಗಲ್ ಗ್ರಾಮದ ಗ್ರಾಮಸೇವಾ ಸಹಕಾರ ಸಂಘದ ವ್ಯಾಪ್ತಿಯಲ್ಲಿ ಬರುವ ಹಳ್ಳಿಯ ಜನರಿಗೆ ಹಸಿರು ಹಾಗೂ ಕೆಂಪು ಕಾರ್ಡುಗಳ ಧಾನ್ಯ ವಿತರಣೆಯಲ್ಲಿ ಅವ್ಯವಹಾರ ನಡೆದಿದ್ದು ಈಗಾಗಲೇ ಗ್ರಾಮಸ್ಥರಿಂದ ತಾರೀಖು ೬-೧-೧೯೬೬ರಂದು ಹುಕ್ಕೇರಿ ತಾಲ್ಲೂಕಿನ ತಹಶೀಲ್ದಾರ್ ಅವರಿಗೆ ದೂರನ್ನು ನೀಡಿರುತ್ತಾರೆ.